ಪ್ರಸ್ತಾವ ಅಂಗೀಕರಿಸಲ್ಪಟ್ಟಿತ್ತು ಮತ್ತು ವಿಧೇಯಕದ ಮಂಡನೆಗೆ ಅನುಮತಿ ನೀಡಲಾಯಿತು.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು, ನಗರಾಭಿವೃದ್ಧಿ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ೧೯೮೭ನೇ ಇಸವಿಯ ಕರ್ನಾಟಕ ಸಚಿವರುಗಳು ಸಂಬಳ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.— ವಿಧೇಯಕವನ್ನು ಮಂಡಿಸಲಾಗಿದೆ.*

೧೯೮೭ನೇ ಇಸವಿಯ ಸಾರ್ವಜನಿಕ ವರ್ಕ್ಸ್ (ಕಾಲಮಿತಿ ವಿಸ್ತರಣೆ) (ಕರ್ನಾಟಕ ತಿದ್ದುಪಡಿ) ವಿಧೇಯಕ

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು, ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಗ್ರಾಮಾಭಿವೃದ್ಧಿ, ವಸತಿ ಹಾಗೂ ವರ್ಕ್ಸ್ ಮಂತ್ರಿಗಳ ಪರವಾಗಿ).—

ಮಾನ್ಯ ಅಧ್ಯಕ್ಷರೆ,

೧೯೮೭ನೇ ಇಸವಿಯ ಸಾರ್ವಜನಿಕ ವರ್ಕ್ಸ್ (ಕಾಲಮಿತಿ ವಿಸ್ತರಣೆ) (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ,

"೧೯೮೭ನೇ ಇಸವಿಯ ಸಾರ್ವಜನಿಕ ವರ್ಕ್ಸ್ (ಕಾಲಮಿತಿ ವಿಸ್ತರಣೆ) (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ಅನುಮತಿ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ,

೧೯೮೭ನೇ ಇಸವಿಯ ಸಾರ್ವಜನಿಕ ವರ್ಕ್ಸ್ (ಕಾಲಮಿತಿ ವಿಸ್ತರಣೆ) (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಗಿದೆ.

೪) ೧೯೮೭ನೇ ಇಸವಿಯ ಕರ್ನಾಟಕ ಕೃಷಿ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕ.

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಕೃಷಿ ಮತ್ತು ತೋಟಗಾರಿಕೆ ರಾಜ್ಯಮಂತ್ರಿಗಳ ಪರವಾಗಿ).—

ಮಾನ್ಯ ಅಧ್ಯಕ್ಷರೆ,

೧೯೮೭ನೇ ಇಸವಿಯ ಕರ್ನಾಟಕ ಕೃಷಿ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

* Annexure